# ಒಲವಿನ ಮುಖದ ಹಿಂದೆ ನಂಜಿನ ನೆರಳು

‘ಅದೂ ಏಕೋ... ಉಸಿರಾಟದ ತೊಂದರೆ ಆಯಿತು...’ ವೀಣಾ ಸ್ಪಷ್ಟನೆ ಕೊಡುವ ಯತ್ನ ನಡೆಸಿ, ಬಳಿಕ ತಮ್ಮ ಸುಳ್ಳನ್ನು ಮುಂದುವರೆಸುವ ಸಾಹಸ ಮಾಡಲಾಗದೇ ಅರ್ಧಕ್ಕೇ ನಿಲ್ಲಿಸಿದರು. ಅಷ್ಟರಲ್ಲಿ ನಿವೇದಿತಾ ನೆಂಟರು ಹೋದ ಸುಳಿವು ದೊರೆತು ಹೊರ ಬಂದಳು.

‘ನಿಧಿ ಮಂಚದ ಕೆಳಗಿನ ಟಬ್‌ಗೆ ಹೋಗಿದ್ದು ಹೇಗೆ?’ ಅವನು ತನಗೆ ಸತ್ಯ ತಿಳಿದಿದೆಯೆಂಬಂತೆ ಮತ್ತೊಂದು ಬಾಂಬು ಸಿಡಿಸಿದಾಗ ಎಲ್ಲರ ಮುಖ ಬಿಳುಪೇರಿತು.

ಪ್ರದೀಪ ಮುಂದುವರೆದು, ‘ಟಬ್‌ನಲ್ಲಿದ್ದ ಮಗುವಿನ ಮೇಲೆ ಬಟ್ಟೆ ಮುಚ್ಚಿದ್ದರಿಂದ ತಾನೇ ನಿಧಿಗೆ ಉಸಿರಾಟದ ತೊಂದರೆ ಆಗಿದ್ದು. ಈ ಸಂಗತಿ ಯಾಕೆ ನನ್ನತ್ರ ಮುಚ್ಚಿಡುವ ಪ್ರಯತ್ನ ಮಾಡಿದ್ದು ನೀವು?’

ನಿವೇದಿತಾ ಅಳಲು ಶುರು ಮಾಡಿದಳು. ‘ನನ್ಗೂ ಗೊತ್ತಿಲ್ಲರೀ... ನಾನು ಬರುವಾಗ ಮಗು ಮಂಚದ ಮೇಲಿರಲಿಲ್ಲ. ನೋಡಿದ್ರೆ ಟಬ್‌ನಲ್ಲಿತ್ತು. ಒಂಚೂರು ವಿಳಂಬ ಆಗಿದ್ರೂ ಪರಿಸ್ಥಿತಿ ಬೇರೆ ಆಗಿರೋದು.’

ವೀಣಾ ಅಸಹನೆಯಿಂದ ‘ಇದೆಲ್ಲಾ ಆ ಕೃತ್ತಿಕಾ ಅವಳಿ ಮಕ್ಕಳದ್ದೇ ಕೆಲಸ. ಇಡೀ ದಿನ ಇದರ ಹಿಂದೇನೆ ಬಿದ್ದಿದ್ದವು. ಹಾಳಾದವು. ಹೋಗೋವಾಗ ಇಂಥ ಕೆಲಸ ಮಾಡ್ಬಿಟ್ಟು ಹೋಗಿದ್ದಾರೆ. ಬಾಲ ಇಲ್ಲದ ಕೋತಿಗಳು. ಆ ಕೃತ್ತಿಕಾ ತನ್ನ ಮಕ್ಕಳು ಸುಭಗರು ಅಂತ ತಿಳ್ಕೊಂಡಿದ್ದಾಳೆ. ನಮ್ಗೆ ಅನ್ನಲು ಆಗುತ್ತಾ. ಅಣ್ಣ ಅಂದರೆ ನಮ್ಗೆ ತುಂಬಾ ಗೌರವ, ಪ್ರೀತಿ. ಅವನಿಗಾಗಿ ಬಾಯಿ ಮುಚ್ಚಿಕೊಂಡು ಸಹಿಸಿಕೊಳ್ಳಬೇಕಾಯಿತು’.

‘ಕೃತ್ತಿಕಾ ನನ್ಗೆ ಎಲ್ಲಾ ಹೇಳಿದ್ದಾರೆ ಅತ್ತೆ... ಅವ್ರ ಮಕ್ಳು ಈ ಕೆಲಸ ಮಾಡಿಲ್ವಂತೆ.’

‘ಇಂಥ ತಪ್ಪು ಮಾಡಿದವರು ಯಾರೂ ತಾವು ಮಾಡಿದ್ದಾರೆ ಅಂತ ಒಪ್ಪಿಕೊಳ್ತಾರಾ ಪ್ರದೀಪ ನೀನೇ ಹೇಳು? ಅವ್ರಲ್ಲದೇ ಬೇರೆ ಯಾರು ತಾನೇ ಇಂಥ ಕೆಲಸ ಮಾಡಲು ಸಾಧ್ಯ? ಅಲ್ಲಿ ಅವ್ರು ಬಿಟ್ಟರೆ ಇದ್ದದ್ದು ನಿವೇದಿತಾ ಮಾತ್ರ. ಅವ್ಳು ಮಾಡ್ತಾಳಾ?’ ವೀಣಾ ಸಹಜವಾಗಿ ಎನ್ನುವಂತೆ ನುಡಿದು ಅವನ ಮನವರಿಕೆ ಮಾಡಿಕೊಡುವ ಯತ್ನ ನಡೆಸಿದರು.

‘ಯಾಕೆ ಮಾಡಿರಬಾರದು? ಅವ್ಳ ವರ್ತನೆ ಇತ್ತೀಚೆಗೆ ಸರಿ ಇಲ್ಲ. ನಿಮ್ಗೆ ಕೂಡಾ ನಾನು ಕರೆಸಿ ಈ ವಿಚಾರ ಹೇಳಿದ್ದೆ. ಅಲ್ಲಿಂದ ಇಲ್ಲಿಗೆ ಹೊರಡುವಾಗ ಕೂಡಾ ನಾನು ಈ ವಿಚಾರದ ಬಗ್ಗೆ ಎಚ್ಚರಿಕೆ ವಹಿಸಲು ಹೇಳಿದ್ದೆ. ನನ್ನ ಸಂದೇಹ ನಿಜವಾಯಿತು’ ಪ್ರದೀಪ ನುಡಿದಾಗ ನಿವೇದಿತಾ ಬೆಚ್ಚಿದಳು.

‘ಏನು ಹೇಳ್ತಿದೀರಾ ಪ್ರದೀಪ್? ನಾನು ಇಂಥ ಕೆಲಸ ಮಾಡ್ತೀನಾ? ನನ್ನ ಮಗೂ ಜೀವಾನಾ ನಾನೇ ತೆಗೀತೀನಾ? ನಿಮ್ಗೆ ಇಂಥ ಅಪವಾದ ನನ್ನ ಮೇಲೆ ಹಾಕಲು ಮನಸ್ಸಾದರೂ ಹೇಗೆ ಬಂತು?’ ಅಷ್ಟು ಹೇಳುವಾಗಲೇ ಅವಳ ಕಂಠ ಬಿಗಿದು ದನಿ ಗದ್ಗದ ಗೊಂಡಿತು.

ಪ್ರದೀಪನ ಬಾಯಿ ಕಟ್ಟಿತು. ಕಣ್ಣೆತ್ತಿ ಪತ್ನಿಯ ಮುಖವನ್ನು ನೋಡದಾದ. ವೀಣಾ ಅಸಮಾಧಾನಗೊಂಡರು, ‘ಪ್ರದೀಪ, ನೀನು ಆ ಕೃತ್ತಿಕಾ ಮಾತು ಕೇಳಿ ಇಲ್ಲದ ಅಪವಾದ ಹೊರಿಸಬೇಡ. ನಿನ್ಗೆ ಇವ್ಳನ್ನು ಕಂಡರೆ ಆಗದಿದ್ದರೆ ಹೇಳು. ಆದರೆ ಇಂಥ ಆರೋಪ ದಯವಿಟ್ಟು ಮಾಡಬೇಡ. ನಿನ್ಗೆ ಕೈ ಮುಗೀತೀನಿ’ ಎಂದು ಬಿಟ್ಟರು. ಕೇಶವರು ಕೂಡಾ ನೊಂದ ದನಿಯಲ್ಲಿ, ‘ಹೌದು ಪ್ರದೀಪ. ಈ ಆಪಾದನೆ ಭರಿಸುವಷ್ಟು ನಮ್ಮ ಗುಂಡಿಗೆ ಗಟ್ಟಿ ಇಲ್ಲ’.

ಪ್ರದೀಪ ಅಸಹಾಯಕತೆಯಿಂದ, ‘ನಾನು ವೃಥಾ ಇಂಥ ಆರೋಪ ಮಾಡುತ್ತಿಲ್ಲ. ನಾನು ಕಣ್ಣಾರೆ ನೋಡಿದ್ದೀನಿ. ಅಲ್ಲದೆ ಈಗ ಪುನಃ ನಿಧಿಯ ಜೀವಕ್ಕೆ ಕುತ್ತು ಬಂದಿದೆ. ನಾನು ಅಲ್ಲಿಂದ ಕಳಿಸುವಾಗಲೇ ಇದರ ಮುನ್ಸೂಚನೆ ಕೊಟ್ಟಿದ್ದೆ. ಅಷ್ಟಾಗಿಯೂ ಅದು ಪುನರಾವರ್ತನೆಯಾಗಿದೆ. ನಾನಂತೂ ಇದನ್ನು ಮಾಡಲಿಲ್ಲ, ಆದರೂ ಈ ಪ್ರಯತ್ನ ಆಗಿದೆ ಅಂದರೆ ಬೇರೆ ಯಾರು ಮಾಡಲು ಸಾಧ್ಯ? ನಿಮಗೆ ಯಾಕೆ ಅರ್ಥ ಆಗುತ್ತಿಲ್ಲ?’

